**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಮಧುಗಿರಿ**

**O.S. No. 258 /2013 DW-5**

**ಪ್ರಮಾಣವಚನ ಬೋಧಿಸಿದ ದಿನಾಂಕಃ 16-01-2024**

**ಮುಖ್ಯ ವಿಚಾರಣೆ : ಶ್ರೀ ಟಿ ಡಿ ಪ್ರತಿವಾದಿ ಪರ ವಕೀಲರಿಂದ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತದೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ ಹಾಗೂ ಅದಕ್ಕೆ ಸಹಿ ಮಾಡಿರುತ್ತೇನೆ.

ಪ್ರತಿವಾದ ಪತ್ರದಲ್ಲಿ ಕೋರಿರುವಂತೆ ವಾದಿಯ ದಾವೆಯನ್ನು ವಜಾಗೊಳಿಸಬೇಕಾಗಿ ಕೇಳಿಕೊಳ್ಳುತ್ತಿದ್ದೇನೆ.

(ಈ ಹಂತದಲ್ಲಿ ವಾದಿ ಪರ ವಕೀಲರು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು)

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಮಧುಗಿರಿ.**

**ಪ್ರಮಾಣವಚನ ಬೋಧಿಸಿದ ದಿನಾಂಕಃ 05-02-2024**

**ಪಾಟೀ ಸವಾಲುಃ ಶ್ರೀ ಪಿಡಿಟಿ ವಾದಿ ಪರ ವಕೀಲರಿಂದಃ**

ದಾವಾ ಎ ಷೆಡ್ಯೂಲ್ ಸ್ವತ್ತು ರಾಮದಾಸಪ್ಪರವರ ಸ್ವಾದೀನದಲ್ಲಿದೆ. ರಂಗಪ್ಪ ಮತ್ತು ಅವರ ಮಗ ಚಿಕ್ಕ ಮಾರಪ್ಪ ರವರಿಂದ ರಾಮದಾಸಪ್ಪರವರು ಸದರಿ ಸ್ವತ್ತನ್ನು ಕ್ರಯಕ್ಕೆ ಕೊಂಡುಕೊಂಡಿರುತ್ತಾರೆ. ಆ ಕ್ರಯಪತ್ರವನ್ನು ನಾನು ಓದಿದ್ದೇನೆ. 1968 ನೇ ಇಸವಿಯಲ್ಲಿ ಕ್ರಯ ಆಗಿರುತ್ತದೆ. ದಾವ ಎ ಷಡ್ಯೂಲ್ ಸ್ವತ್ತಿನ ಚೆಕ್ಕು ಬಂದಿಯನ್ನು ಸದರಿ ಕ್ರಯ ಪತ್ರದಲ್ಲಿ ಬರೆದಿಲ್ಲ. ರಾಮದಾಸಪ್ಪರವರು ಕ್ರಯಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿಯಲ್ಲಿನ ಜಮೀನಿನ ಸ್ವಾದೀನದಲ್ಲಿ ಇದ್ದಾರೆ. ಅವರು ಸ್ವಾದೀನದಲ್ಲಿರುವ ಜಮೀನಿನ ಚೆಕ್ಕುಬಂದಿ ಪೂ ರಾಮಣ್ಣನವರು ಜಮೀನು, ಪಶ್ಚಿಮಕ್ಕೆ ಅಕ್ಕಸಾಲೀಗ ಪುಟ್ಟಯ್ಯ ರವರ ಜಮೀನು , ಉ ಕ್ಕೆ ಬೊಮ್ಮಲಿಂಗಪ್ಪರವರ ಜಮೀನು ದಕ್ಷಿಣಕ್ಕೆ ಮಲ್ಲಯ್ಯ ಅಂದರೆ ನಮ್ಮ ಜಮೀನು ಆಗಿರುತ್ತದೆ. ರಾಮದಾಸಪ್ಪರವರು ಒಟ್ಟು ಒಂದೇ ಜಮೀನನ್ನು ಕೊಂಡುಕೊಂಡಿರುತ್ತಾರೆ. ಈಗ ಹೇಳಿದ ಚೆಕ್ಕುಬಂದಿಯೊಳಗಿನ ಜಮೀನನ್ನು ಹೊರತುಪಡಿಸಿ ರಾಮದಾಸಪ್ಪರವರು ಬೇರೆ ಯಾವ ಜಮೀನನ್ನು ಕೊಂಡುಕೊಂಡಿರುವುದಿಲ್ಲ. ಪೂ ಕ್ಕೆ ಹನುಮಕ್ಕ , ಪ ಕ್ಕೆ ಸರ್ಕಾರಿ ರಸ್ತೆ , ಉ ಕ್ಕೆ ಹನುಮಕ್ಕರವರ ಜಮೀನು, ದ ಕ್ಕೆ ಟಿ ವೆಂಕಟಪ್ಪ ರವರ ಜಮೀನು ಈ ಚೆಕ್ಕುಬಂದಿಯೊಳಗಿರುವ ಜಮೀನನ್ನು ರಾಮದಾಸಪ್ಪರವರು ಕೊಂಡುಕೊಂಡಿದ್ದಾರೆ. 1968 ನೇ ಇಸವಿಯಲ್ಲಿ ಕೊಂಡುಕೊಂಡಿರುತ್ತಾರೆ.

ಪ್ರಶ್ನೆಃ ಈಗ ಹೇಳಿದ ಚೆಕ್ಕುಬಂದಿಯೊಳಗಿನ ಜಮೀನು ಅಂದರೆ ದಾವಾ ಎ ಷೆಡ್ಯೂಲ್ ಸ್ವತ್ತನ್ನು ಯಾವ ಕ್ರಯಪತ್ರದಲ್ಲಿ ಕೊಂಡುಕೊಂಡಿದ್ದಾರೆ ?

ಉತ್ತರಃ ನಿಡಿ 2 ರ ಕ್ರಯಪತ್ರದ ಪ್ರಕಾರ ಕೊಂಡುಕೊಂಡಿರುತ್ತಾರೆ.

ಪ್ರಶ್ನೆಃ ನಿಡಿ 2 ರಲ್ಲಿ ದಾವಾ ಎ ಷೆ ಡ್ಯೂಲ್ ಸ್ವತ್ತಿನ ಚೆಕ್ಕುಬಂದಿಯ ಬರವಣಿಗೆ ಆಗಿದೆಯ ?

ಉತ್ತರಃ ಇಲ್ಲ.

ರಾಮದಾಸಪ್ಪರವರು ಕ್ರಯಕ್ಕೆ ಕೊಂಡುಕೊಂಡಿರುವ ಚೆಕ್ಕುಬಂದಿಯಾಳಗೆ ಬರುವ ಜಮೀನಿನ ಸ ನಂ 106/4 ಆಗಿರುತ್ತದೆ, ಸ ನಂ 105/1 ಅಲ್ಲ ಎಂದರೆ ಸರಿಯಲ್ಲ. ನಿಡಿ 2 ರ ಕ್ರಯಪತ್ರದ ಅಡಿಯಲ್ಲಿ ರಾಮದಾಸಪ್ಪರವರಿಗೆ ಕ್ರಯ ಆಗಿರುವ ಸ್ವತ್ತಿನ ವಿಸ್ತೀರ್ಣ 1 ಎಕರೆ 9 ಗುಂಟೆ ಆಗಿದ್ದು 3 ಎಕರೆ 19 ಗುಂಟೆ ಅಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಮಧುಗಿರಿ.**